ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 79ನೇ ನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಹುದ್ದೆಗಳನ್ನು ಪುನರ್ ಪದನಾಮಗೊಳಿಸಿದುದರ ಪರಿಣಾಮವಾಗಿ, ಸಂಬಂಧಪಟ್ಟ ತೆರಿಗೆ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡುವುದು ಅವಶ್ಯವಾಗಿದೆ.

ಶಾ ವ್ಯಾಲೀಸ್ ಮೊಕದ್ದಮೆಯಲ್ಲಿ ನಮ್ಮ ಉಚ್ಚ ನ್ಯಾಯಾಲಯದ ಪೂರ್ಣಪೀಠವು, ಜನಾರ್ಧನಾಚಾರ್ಯರ ಮೊಕದ್ದಮೆಯಲ್ಲಿ ನಮ್ಮ ಉಚ್ಚ ನ್ಯಾಯಾಲಯದ ವಿಭಾಗ ಪೀಠದ ತೀರ್ಪನ್ನು ತಳ್ಳಿಹಾಕಿ ಅಧಿಸೂಚನೆಗಳ ಮೂಲಕ ಯಾವ ಸರಕುಗಳಿಗೆ ವಿನಾಯಿತಿ ನೀಡಲಾಗಿತ್ತೋ ಆ ಸರಕುಗಳ ವರ್ಗಕ್ಕೆ ಸಂಬಂಧಿಸಿದ ಯಾವುದೇ ನಮೂದನ್ನು ಸೇರಿಸುವ ಮೂಲಕ ಅಧಿನಿಯಮದ ಸುಸಂಗತ ಉಪಬಂಧಗಳು ತರುವಾಯ ತಿದ್ದುಪಡಿಯಾಗಿರುವುದರಿಂದ 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ 8ಎ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಗಳು ಪ್ರವರ್ತನೀಯವಲ್ಲ ಎಂಬುದಾಗಿ ತೀರ್ಪು ನೀಡಿದೆ. ಆದ್ದರಿಂದ ಈಗಾಗಲೇ ಹೊರಡಿಸಲಾದ ಅಧಿಸೂಚನೆಯನ್ನು ಉಳಿಸಿಕೊಳ್ಳುವ ಸಲುವಾಗಿ ಸದರಿ ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾದುದರಿಂದ ಮತ್ತು ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, 1992ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶವನ್ನು ಪ್ರಖ್ಯಾಪಿಸುವ ಮೂಲಕ ತಿದ್ದುಪಡಿಗಳನ್ನು ತರಲಾಯಿತು.

ಎಂ. ವೀರಪ್ಪ ಮೊಯಿಲಿ
ಮುಖ್ಯಮಂತ್ರಿ.
ಮ. ಇನ್ನಾಸಪ್ಪ
ಕಾರ್ಯದರ್ಶಿ.

ಅನುಬಂಧ

1977ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮದ (1977ರ ಕರ್ನಾಟಕ ಅಧಿನಿಯಮದ 27) ಉದ್ಧೃತ ಭಾಗ

** ** **

3 ಸಿ ತಯಾರಿಕಾ ಘಟಕಗಳಿಗೆ ಮಾರಾಟ ಮಾಡಲಾದ ಸರಕುಗಳಿಗೆ ತೆರಿಗೆ ಸಂದಾಯ ಮಾಡುವ ಹೊಣೆಗಾರಿಕೆ : (1) 3ನೇ ಪ್ರಕರಣದಲ್ಲಿ ಏನೇ ಇದ್ದರೂ, ಅಧಿನಿಯಮದ ಅನುಸೂಚಿಯ 16 ಬಿ ನಮೂದಿನಲ್ಲಿ ನಿರ್ದಿಷ್ಟಪಡಿಸಲಾದ ಸರಕುಗಳನ್ನು, 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ಒಂದು ವರ್ಷದಲ್ಲಿ ಒಟ್ಟಾರೆ ಹತ್ತು ಲಕ್ಷಗಳಿಗಿಂತ ಕಡಿಮೆ ವಹಿವಾಟು ಇರುವಂಥ ತಯಾರಿಕಾ ಘಟಕಗಳಿಗೆ ಮಾರಾಟ ಮಾಡಿದರೆ ಅಂಥ ಸರಕುಗಳ ಪ್ರವೇಶದ ಸಂಬಂಧದಲ್ಲಿ ಯಾವೊಬ್ಬ ವ್ಯಾಪಾರಿಯೂ ಯಾವುದೇ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ.

(2) ಸರಕುಗಳನ್ನು ಮಾರಾಟ ಮಾಡುವ ಡೀಲರನ್ನು, ಗೊತ್ತುಪಡಿಸಿದ ಪ್ರಾಧಿಕಾರದಿಂದ ಪಡೆಯಲಾದ ಗೊತ್ತುಪಡಿಸಿದ ನಮೂನೆಯಲ್ಲಿ ಸರಕುಗಳನ್ನು ಖರೀದಿಸುವ ತಯಾರಿಕಾ ಘಟಕರು ಗೊತ್ತುಪಡಿಸಿದ ವಿಧಾನದಲ್ಲಿ ಮೀಡಿದೆ ಒಂದು ಘೋಷಣೆಯನ್ನು ಕರನಿರ್ಧಾರಣಾ ಪ್ರಾಧಿಕಾರಿಗೆ ಸಲ್ಲಿಸಿದ ಹೊರತು, (1)ನೇ ಉಪ ಪ್ರಕರಣದ ಉಪಬಂಧಗಳು ಅವನಿಗೆ ಅನ್ವಯಿಸತಕ್ಕದ್ದಲ್ಲ.

(3) ಸರಕುಗಳನ್ನು ಖರೀದಿಸುವ ತಯಾರಿಕಾ ಘಟಕವು ಸಲ್ಲಿಸದ ಘೋಷಣೆಯು ಸರಿಯಲ್ಲವೆಂದು ಕಂಡುಬಂದರೆ, ಕರ ನಿರ್ಧಾರಣಾ ಪ್ರಾಧಿಕಾರಿಯು ಅಂಥ ಘಟಕಕ್ಕೆ ವಿಚಾರಣೆಗೊಳಪಡಲು ಒಂದು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಲಿಖಿತ ಆದೇಶದ ಮೂಲಕ, ಅಂಥ ಸರಕುಗಳ ಪ್ರವೇಶದ ಮೇಲೆ 3ನೇ ಪ್ರಕರಣದ ಮೇರೆಗೆ ವಿಧಿಸಲಾಗುವ ತೆರಿಗೆ ಮೊಬಲಗಿಗಿಂತ ಕಡಿಮೆಯಿಲ್ಲದ ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸತಕ್ಕದ್ದು. ಆದರೆ ಆ ಮೊಬಲಗು ಅಂಥ ತೆರಿಗೆ ಮೊಬಲಗಿನ ಎರಡರಷ್ಟು ಮೊಬಲಗನ್ನು ಮೀರತಕ್ಕದ್ದಲ್ಲ.

ವಿವರಣೆ : ಈ ಪ್ರಕರಣ ಮತ್ತು ಅನೂಸೂಚಿಯ 16ಬಿ ಕ್ರಮಸಂಖ್ಯೆಯ ವಿವರಣೆ 1ರ ಉದ್ದೇಶಗಳಿಗಾಗಿ, ತಯಾರಿಕಾ ಘಟಕ ಎಂಬುದರಲ್ಲಿ ಸರಕುಗಳ ಸಂಸ್ಕರಣೆ, ವೃದ್ಧಿ ಅಥವಾ ದುರಸ್ಥಿಯಲ್ಲಿ ನಿರತವಾದ ಒಂದು ಘಟಕವೂ ಸೇರುತ್ತದೆ.

4 **ಡೀಲರುಗಳ ನೋಂದಣಿ** (1) (ಎ) ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ ಸರಕುಗಳನ್ನು ಖರೀದಿಸುವ ಅಥವಾ ಪಡೆಯುವ ಮತ್ತು ಸ್ಥಳೀಯ ಪ್ರದೇಶದಲ್ಲಿ ವ್ಯವಹಾರ ನಡೆಸುವ ಮತ್ತು 1957ರ ಕರ್ನಾಟಕ ಮರಾಟ ತೆರಿಗೆ ಅಧಿನಿಯದಮ (1957ರ ಕರ್ನಾಟಕ ಅಧಿನಿಯಮ 25) ಮೇರೆಗೆ ವರ್ಷದಲ್ಲಿ ಒಟ್ಟಾರೆ ವಹಿವಾಟು ಮೊತ್ತವು ಎಪ್ಪತ್ತೈದು ಸಾವಿರ ರೂಪಾಯಿಗಿಂತ ಕಡಿಮೆಯಿಲ್ಲದ ಪ್ರತಿಯೊಬ್ಬ ಡೀಲರನ್ನು ಅಥವಾ 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯದ 25) ಉದ್ಧೃತ ಭಾಗ.

** ** **

8,ಎ. ತೆರಿಗೆಯಿಂದ ವಿನಾಯಿತಿ ಮತ್ತು ತೆರಿಗೆ ಇಳಿತಾಯಗಳನ್ನು ಅಧಿಸೂಚಿಸಲು ರಾಜ್ಯ ಸರ್ಕಾರದ ಅಧಿಕಾರ, (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ,

(ಎ) ಅನುಕ್ರಮದ ವ್ಯಾಪಾರಿಗಳು ಮಾಡಿದ ಮಾರಾಟದ ಸರಣಿಯಲ್ಲಿನ ಎಲ್ಲ ಹಂತಗಳಲ್ಲಿ ಯಾವುದೇ ನಿರ್ದಿಷ್ಟ ಪಡಿಸಿದ ಸರಕುಗಳ ಅಥವಾ ಸರಕುಗಳ ವರ್ಗದ ಮಾರಾಟ ಅಥವಾ ಖರೀದಿಯ ಮೇಲೆ ; ಅಥವಾ

(ಬಿ) ನಿರ್ದಿಷ್ಟಪಡಿಸಿದ ವ್ಯಕ್ತಿಗಳ ಯಾವುದೇ ವರ್ಗದಿಂದ ಒಟ್ಟು ವಹಿವಾಟಿನ ಹಣದ ಪೂರ್ಣ ಅಥವಾ ಯಾವುದೇ ಭಾಗದ ಬಗ್ಗೆ ;ಅಥವಾ

(ಸಿ) ನಿರ್ದಿಷ್ಟಪಡಿಸಿದ ವ್ಯಾಪಾರಿಗಳ ಯಾವುದೇ ವರ್ಗವು ತಮ್ಮ ಒಟ್ಟು ವಹಿವಾಟಿನ ಹಣದ ಪೂರ್ಣ ಅಥವಾ ಯಾವುದೇ ಭಾಗದ ಸಂಬಂಧವಾಗಿ ನಿರ್ದಿಷ್ಟಪಡಿಸಿದ ಸರಕುಗಳ ಯಾವುದೇ ವರ್ಗದ ಮಾರಾಟ ಅಥವಾ ಖರೀದಿಯ ಮೇಲೆ ;

ಈ ಅಧಿನಿಯಮದ ಮೇರೆಗೆ ಸಂದಾಯವಾಗತಕ್ಕ ಯಾವುದೇ ತೆರಿಗೆಯ ಸಂಬಂಧವಾಗಿ ದರದಲ್ಲಿ ವಿನಾಯಿತಿ ಅಥವಾ ಇಳಿತಾಯ ನೀಡಬಹುದು ;

(2) (1)ನೇ ಉಪ ಪ್ರಕರಣದ ಮೇರೆಗೆ ಅಧಿಸೂಚಿಸಲಾದ ತೆರಿಗೆಯಿಂದ ಯಾವುದೇ ವಿನಾಯಿತಿ ಅಥವಾ ತೆರಿಗೆಯ ದರದಲ್ಲಿನ ಇಳಿತಾಯವು, ಅಧಿಸೂಚನೆ ಎಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(2ಎ) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಒಂದು ಅನುಸೂಚಿಯಿಂದ ಇನ್ನೊಂದು ಅನುಸೂಚಿಗೆ ಯಾವುದೇ ನಮೂದು ಅಥವಾ ಅದರ ಭಾಗವನ್ನು ಬದಲಾಯಿಸಬಹುದು ಮತ್ತು ಮಾರಾಟ ಅಥವಾ ಖರೀದಿಯ ಮೇಲಿನ ವಿಧಿಸುವಿಕೆಯ ಹಂತವನ್ನು ಬದಲಾಯಿಸಬಹುದು, ಆದರೆ ಯಾವುದೇ ಸಂದರ್ಭದಲ್ಲಿ ತೆರಿಗೆಯ ದರವನ್ನು ಏರಿಸುವ ರೀತಿ ಆಲ್ಲ ;

ಪರಂತು, ಯಾವುದೇ ಸರಕುಗಳ ಸಂದರ್ಭದಲ್ಲಿ ಈ ಉಪ ಪ್ರಕರಣದ ಮೇರೆಗೆ ವಿಧಿಸುವಿಕೆಯ ಹಂತವನ್ನು ಬದಲಾಯಿಸಿರುವಾಗ ಮತ್ತು ಅಂಥ ಸರಕುಗಳು ಬದಲಾಯಿಸಲ್ಪಟ್ಟ ನಮೂದಿನ ಮೇರೆಗೆ ತೆರಿಗೆ ವಿಧಿಸುವುದಕ್ಕೆ ಒಳಪಟ್ಟಿದ್ದಾರೆ. ಆಗ ಅಂಥ ಸರಕುಗಳು ವರ್ಗಾಯಿಸಲ್ಪಟ್ಟ ನಮೂದಿನ ಮೇರೆಗೆ ತೆರಿಗೆಗೆ ಒಳಪಟ್ಟಿರತಕ್ಕುದಲ್ಲ.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲ (1)ನೇ ಉಪಪ್ರಕರಣದ ಅಥವಾ (2ಎ) ಉಪ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯನ್ನು ರದ್ದುಪಡಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

** ** **

22ಎ. ಜಂಟಿ ಕಮೀಷನರು ಮತ್ತು ಕಮೀಷನರ ಪರಿಷ್ಕರಣಾಧಿಕಾರಿಗಳು

(1) ** **

(2) ** ** **

(2) ಜಂಟಿ ಕಮೀಷನರು ಅಥವಾ ಕಮೀಷನರು,

(ಎ) ಆದೇಶದ ಬಗ್ಗೆ ಅಪೀಲು ಸಲ್ಲಿಸುವ ಸಮಯವು ಮುಕ್ತಾಯವಾಗಿರದಿದ್ದರೆ

(ಬಿ) ಆದೇಶವನ್ನು 20ನೇ ಪ್ರಕರಣ ಅಥವಾ 22ನೇ ಪ್ರಕರಣದ ಮೇರೆಗಿನ ಒಂದು ಅಪೀಲು ಅಥವಾ ಉಚ್ಚನ್ಯಾಯಾಲಯದಲ್ಲಿನ ಒಂದು ಪರಿಷ್ಕರಣೆಯ ವಸ್ತು ವಿಷಯವನ್ನಾಗಿಸಿದ್ದರೆ ;

(ಸಿ) ಪರಿಷ್ಕರಿಸಬೇಕೆಂದು ಉದ್ದೇಶಿಸಿರುವ ಆದೇಶವನ್ನು ಹೊರಡಿಸಿದ ತರುವಾಯ ನಾಲ್ಕು ವರ್ಷಗಳಿಗಿಂತ ಹೆಚ್ಚು ಅವಧಿ ಮುಗಿದಿದ್ದರೆ,

ಸಂದರ್ಭಾನುಸಾರ (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.